ಮೆ:ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್ ಇವರು ಸರ್ವೆ ನಂ-116ಪಿ1(ಭಾಗ), 117 ಮತ್ತು 106, ಧರ್ಮಪುರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 10.90 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 4,80,000 ಟನ್ ಸಾಮರ್ಥ್ಯದ ಕಬ್ಬಿಣದ ಅದಿರು ಪ್ರತ್ಯಕೀಕರಣ ಘಟಕ ಮತ್ತು ಪ್ರತಿ ವರ್ಷಕ್ಕೆ 15,000 ಟನ್ ಸಾಮರ್ಥ್ಯದ ಮ್ಯಾಂಗನೀಸ್ ಅದಿರು ಪ್ರತ್ಯಕೀಕರಣ ಘಟಕದ ಪ್ರಸ್ತಾವನೆಯನ್ನು (ಯೋಜನಾ ಪ್ರದೇಶದಲ್ಲಿ) ದಿನಾಂಕ:22-12-2021 ರಂದು ಬೆಳಗ್ಗೆ 11.30 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಉದ್ದೇಶಿತ ಯೋಜನಾ ಸ್ಥಳ<br>**ಮೆ: ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್,<br>ಸರ್ವೆ ನಂ-116ಪಿ1(ಭಾಗ), 117 ಮತ್ತು 106, ಧರ್ಮಪುರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.** |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | **ಪದನಾಮ** |
| 1. | ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ | **ಅಧ್ಯಕ್ಷರು** |
| 2 | ಶ್ರೀ ಕೆ.ರಾಜು, ಹಿರಿಯ ಪರಿಸರಅಧಿಕಾರಿಗಳು (ಪ್ರಭಾರ), ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಬಳ್ಳಾರಿ. | **ಸದಸ್ಯರು** |
| 3. | ಶ್ರೀ ಉಮಾಶಂಕರ್ ಪಿ. ಕೆ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಬಳ್ಳಾರಿ. | **ಸದಸ್ಯ ಸಮಾವೇಷಕರು** |

| | |
|---|---|
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | |
| 1 | ಶ್ರೀ ಹನುಮಂತಪ್ಪ ಹೆಚ್. ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ |
| 2 | ಶ್ರೀ ಹೆಚ್. ಇಮಾಮ್ ಸಾಹೇಬ್, ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಸಂಡೂರು |
| 3 | ಶ್ರೀ ಎಲ್.ಡಿ.ಜೋಷಿ, ಆಯುಕ್ತರು ವಾಡಾ, ತೋರಣಗಲ್ಲು |
| 4 | ಶ್ರೀ ಎ.ಯರ್ರಿಸ್ವಾಮಿ, ಕಂದಾಯ ಇಲಾಖೆ |
| 5 | ಶ್ರೀ ಕೆ. ಹೆಚ್. ಯೊಗೇಶ, ಸಹಾಯಕ ಉಪ ನೀರಕ್ಷಕರು, ಸಂಡೂರು |
| 6 | ಶ್ರೀ ಕೆ. ಈಶ್ವರ್, ಕಂದಾಯ ನೀರಕ್ಷಕರು, ಸಂಡೂರು |
| 7 | ಶ್ರೀಮತಿ ಎಸ್.ಕಲ್ಪನಾ, ಗ್ರಾಮ ಲೆಕ್ಕಿಗ, ಧರ್ಮಪುರ |
| 8 | ಶ್ರೀ ಎಸ್. ಅನಂತರಾಜ್, ಗ್ರಾಮ ಆರೋಗ್ಯ ಅಧಿಕಾರಿ ಸಂಡೂರು |
| 9 | ಶ್ರೀ ಬಿ.ಕೆ ಗುರುಪ್ರಸಾದ. ಪೋಲೀಸ್ ಇಲಾಖೆ |
| ಮೆ: ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್, ಉದ್ದಿಮೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು. | |
| 1. | ಶ್ರೀ ವೆಂಕಟೇಶ್ ರೆಡ್ಡಿ, ಪ್ರಧಾನ ವ್ಯವಸ್ಥಾಪಕರು |
| 2. | ಶ್ರೀ ಕುಮಾರ ರೆಡ್ಡಿ, ಉಪ ಪ್ರಧಾನ ವ್ಯವಸ್ಥಾಪಕರು |
| 3. | ಶ್ರೀ ಎಸ್. ಶಾಶವಾಲಿ, ಹಣಕಾಸು ವ್ಯವಸ್ಥಾಪಕರು |
| 4. | ಶ್ರೀ ಹೆಚ್.ಕೆ. ಕುಬೇರ, ಕಛೇರಿ ವ್ಯವಸ್ಥಾಪಕರು. |
| 5 | ಶ್ರೀ ಕಾರ್ತಿಕ, ಅಭಿಯಂತರರು |

| | |
|---|---|
| 6 | ಶ್ರೀ ಷಡಕ್ಷರಿ, ಮೇಲ್ವಿಚಾರಕರು |
| 7 | ಶ್ರೀ ಎಮ್.ಪಿ.ಎಮ್ ಶನ್ಮುಕಸ್ವಾಮಿ, |
| 8 | ಶ್ರೀ ಕೃಷ್ಣ ನಾಯ್ಕ್, ಮೇಲ್ವಿಚಾರಕರು |
| 9 | ಶ್ರೀ ಷನ್ಮುಕಪ್ಪ, ಮೇಲ್ವಿಚಾರಕರು |
| 10 | ಶ್ರೀ ಪಿ.ಟಿ. ಮಂಜು |
| 11 | ಶ್ರೀ ಕೇಶವ.ಕೆ.ಎಸ್. |
| 12 | ಶ್ರೀ ಎಲ್. ಅಭಿಯೋಧ್ಯ |
| 13 | ಶ್ರೀ ಅಶ್ವತ ನಾರಾಯಣ, ಮೆ. ಎನ್ವಿರೋ ಸೌಲುಷನ್ ಪ್ರೈವೇಟ್ ಲಿಮಿಟೆಡ್, ಸಲಹೆಗಾರರು |
| 14 | ಶ್ರೀ ಸಾಯಿ ಸಾಗರ, |

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

**ಪೀಠಿಕೆ**

ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್ ಇವರು ಸರ್ವೆ ನಂ-116ಪಿ1(ಭಾಗ), 117 ಮತ್ತು 106, ಧರ್ಮಪುರ ಗ್ರಾಮ ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 10.90 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 4,80,000 ಟನ್ ಸಾಮರ್ಥ್ಯದ ಕಬ್ಬಿಣದ ಅದಿರು ಪ್ರತ್ಯಕೀಕರಣ ಘಟಕ ಮತ್ತು ಪ್ರತಿ ವರ್ಷಕ್ಕೆ 15,000 ಟನ್ ಸಾಮರ್ಥ್ಯದ ಮ್ಯಾಂಗನೀಸ್ ಅದಿರು ಪ್ರತ್ಯಕೀಕರಣ ಘಟಕದ ಪ್ರಸ್ತಾವನೆಯನ್ನು ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ. ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರಿಗೆ ಸದರಿ ಯೋಜನೆಯ ಟರ್ಮ್ಸ್ ಆಫ್ ರೆಫೆರೆನ್ಸ್ (TOR) ಸಂಖ್ಯೆ SEIAA 05 IND 2021 ದಿನಾಂಕ : 01-07-2021 ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ. ಎನ್ವಿರೋ ಸೌಲುಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 18-08-2021 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 04-10-2021 ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಆದೇಶದನ್ವಯ ದಿನಾಂಕ: 22-12-2021 ರಂದು ಬೆಳಿಗ್ಗೆ 11.30 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಪ್ರಜಾವಾಣಿ (ಕನ್ನಡ) ಹಾಗೂ ದಿ ಹಿಂದು (ಆಂಗ್ಲ) ಗಳಲ್ಲಿ ದಿನಾಂಕ 22-11-2021 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 24-11-2021 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ. **ಅನುಬಂಧ-3** ರಂತೆ ಲಗತ್ತಿಸಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಾಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ,
- ಜಿಲ್ಲಾ ಪಂಚಾಯತ್, ಕಾರ್ಯಾಲಯ ಬಳ್ಳಾರಿ.
- ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ.
- ತಾಲ್ಲೂಕು ಕಛೇರಿ, ಸಂಡೂರು.
- ಪುರಸಭೆ ಕಾರ್ಯಾಲಯ, ಸಂಡೂರು.
- ಗ್ರಾಮ ಪಂಚಾಯಿತಿ ಕಾರ್ಯಾಲಯ, ಧರ್ಮಪುರ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ
- ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ ಕೊಠಡಿ ಸಂಖ್ಯೆ : 706, 7 ನೇ ಮಹಡಿ, 4 ನೇ ಗೇಟ್, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560001
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆಯ ದಿನಾಂಕ: 22-12-2021 ರಂದು ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ಮಾಹಿತಿಯನ್ನು ದಿನಾಂಕ:24-11-2021 ರಂದು ಪತ್ರದ ಮೂಲಕ ತಿಳಿಸಲಾಗಿರುತ್ತದೆ.

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ವಿಸ್ತರಣಾ ಘಟಕದ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಉದ್ದಿಮೆಯ ಸುತ್ತಮುತ್ತಲಿನ ಹಳ್ಳಿಗಳಾದ ಧರ್ಮಪುರ, ಯಶವಂತನಗರ, ಲಕ್ಷ್ಮೀಪುರ, ಸೀನಬಸಪ್ಪ ಕ್ಯಾಂಪ್, ನಂದಿಹಳ್ಳಿ, ಭುಜಂಗನಗರ, ಸಂಡೂರು ಗ್ರಾಮಗಳಲ್ಲಿ ಕರ ಪತ್ರಗಳನ್ನು ಹಂಚಲಾಗಿದ್ದು ಮತ್ತು ಧ್ವನಿವರ್ಧಕಗಳ ಮೂಲಕವು ಸಹ ಪ್ರಚಾರವನ್ನು ದಿನಾಂಕ 20-12-2021 ಮತ್ತು 21-12-2021 ರಂದು ಮಾಡಲಾಗಿರುತ್ತದೆ. (ಛಾಯಾ ಚಿತ್ರಗಳನ್ನು **ಅನುಬಂಧ-4**ರಲ್ಲಿ ಲಗತ್ತಿಸಿದೆ)

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ : 20-12-2021 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 22-12-2021 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-5** ರಂತೆ ಲಗತ್ತಿಸಿದೆ.

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 22-12-2021 ರಂದು ಬೆಳಿಗ್ಗೆ 11.30 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಉದ್ದೇಶಿತ ಯೋಜನಾ ಸ್ಥಳವಾದ ಮೆ:ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್, ಧರ್ಮಪುರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಷಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿಗಳಾದ ಶ್ರೀ ಉಮಾಶಂಕರ್ ಪಿ.ಕೆ. ಅವರು ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಮತ್ತು ಹಿರಿಯ ಪರಿಸರ ಅಧಿಕಾರಿ ಶ್ರೀ ಕೆ.ರಾಜು ಅವರಿಗೆ ಸ್ವಾಗತ ಕೋರಿದರು. ಮೆ: ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್, ಕಂಪನಿಯ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ, ಮೆ: ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್, ಕಂಪನಿ ಪರವಾಗಿ ಶ್ರೀ ಎಮ್.ಎಸ್. ಅಶ್ವತ ನಾರಾಯಣ, ಮೆ. ಎನ್ವಿರೋ ಸೌಲುಷನ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು ರವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ದದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಸೀಕರಣ ಪೋಟೊಗಳು, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು ಮತ್ತು ಉದ್ದಿಮೆಯ ಸಿ.ಎಸ್.ಆರ್. ಅಡಿಯಲ್ಲಿ ತೆಗೆದುಕೊಂಡಿರುವ ವಿವಿಧ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ವೆಂಕಟೇಶ ಧರ್ಮಪುರ ಗ್ರಾಮ:-** ರವರು ಮಾತನಾಡುತ್ತಾ ಒಂದು ರಾಷ್ಟ್ರ, ರಾಜ್ಯ ಸಭಲೀಕರಣವಾಗಬೇಕಾದರೆ ರೈತರ ಸ್ವಾವಲಂಭೀಕರಣ ಮತ್ತು ಕೈಗಾರಿಕೋದ್ಯಮ ಕೂಡ ಅವಶ್ಯಕವಾಗಿಬೇಕಾಗಿರುತ್ತದೆ ಎಂದು ತಿಳಿಸಿದರು. ಧರ್ಮಪುರ ಗ್ರಾಮದ ವ್ಯಾಪ್ತಿಯಲ್ಲಿ ಉದ್ದಿಮೆಗಳಿರುವುದಿಲ್ಲವೆಂದು ತಿಳಿಸಿದರು. ಇದು ಒಂದು ಸಣ್ಣ ಪ್ರಮಾಣದ ಉದ್ಯಮವಾಗಿದ್ದು ತಮ್ಮ ಗ್ರಾಮದ ಯುವಕರಿಗೆ ಹಾಗು ನಾಗರೀಕರಿಗೆ ಪ್ರಥಮ ಆಧ್ಯತೆಯ ಮೇರೆಗೆ ಉದ್ಯೋಗ ನೀಡುವಂತೆ ಕೋರಿದರು. ಶಾಲಾ ಮಕ್ಕಳಿಗೆ ಹಾಗು ವೈಧ್ಯಕೀಯ ಚಟುವಟಿಕೆಗಳಿಗೆ ಸಹಾಯ ಮಾಡುವಂತೆ ತಿಳಿಸಿದರು. ನಾರಿ ಹಳ್ಳವು ಸದರಿ ಉದ್ದೇಶಿತ ಸ್ಥಳದ ಹತ್ತಿರದಲ್ಲಿರುವುದರಿಂದ ಉದ್ದಿಮೆಯ ಕಲುಷಿತ ನೀರನ್ನು ಬಿಟ್ಟು ಜಲಚರಗಳಿಗೆ ತೊಂದರೆ ಉಂಟಾಗದಂತೆ ನೋಡಬೇಕೆಂದು ಮನವಿ ಮಾಡಿದರು. ಸಾಧ್ಯವಾದರೆ ಸುತ್ತಮುತ್ತಲಿನ ರೈತರಿಗೆ ಧೂಳಿನ ಪರಿಹಾರವನ್ನು ನೀಡಲು ಅವಕಾಶವಿದ್ದರೆ ನೀಡಬೇಕೆಂದು ತಿಳಿಸಿದರು. ಉದ್ದಿಮೆಯಿಂದ ಗ್ರಾಮಕ್ಕೆ ಹಾಗೂ ತಾಲ್ಲೂಕಿಗೆ ಉಪಯೋಗವಾಗುತ್ತದೆಂದು ತಿಳಿಸಿದರು.

2. **ಶ್ರೀ ಎಂ.ಸಿ. ಉಜ್ಜಪ್ಪ ಧರ್ಮಪುರ ಗ್ರಾಮ:-** ರವರು ಮಾತನಾಡುತ್ತಾ, ಉಧ್ಯಮ ಸ್ಥಾಪನೆಯಾದರೆ ಉದ್ಯೋಗ ದೊರೆಯುತ್ತದೆ ಹಾಗು ಅನೂಕೂಲವಾಗುತ್ತದೆ ಎಂದು ತಿಳಿಸಿದರು. ಧರ್ಮಪುರ ಗ್ರಾಮಕ್ಕೆ ಮೊದಲ ಆಧ್ಯತೆ ನೀಡುವಂತೆ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವಂತೆ ತಿಳಿಸಿದರು. ಗ್ರಾಮದ ಆಸಕ್ತಿಯುಳ್ಳ ಯುವಕರಿಗೆ ಉದ್ಯೋಗ ನೀಡುವಂತೆ ತಿಳಿಸಿದರು. ಕಡುಬಡವ ವಿಧ್ಯಾರ್ಥಿಗಳಿಗೆ ಧನ ಸಹಾಯ ಮಾಡಬೇಕೆಂದು ತಿಳಿಸಿದರು. ನಾರಿಹಳ್ಳ

ಮತ್ತು ನರಸಿಂಹಸ್ವಾಮಿ ದೇವಸ್ಥಾನಕ್ಕೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳಬೇಕು. ಪರಿಸರ ಕಾಳಜಿ ವಹಿಸಿ ರೈತರಿಗೆ ಧನ ಸಹಾಯ ಮಾಡಲು ಅವಕಾಶವಿದ್ದರೆ ಮಾಡಬೇಕೆಂದು ತಿಳಿಸಿದರು. ಧರ್ಮಾಪುರ ಗ್ರಾಮದ ಸಾಮಾಜಿಕ ಅಭಿವೃದ್ದಿಗೆ ಒತ್ತು ಕೊಡಬೇಕೆಂದು ತಿಳಿಸಿದರು. ಗ್ರಾಮದ ದೇವಸ್ಥಾನ ಮತ್ತು ಶಾಲೆಗಳಿಗೆ ಅಭಿವೃದ್ದಿ ಕಾರ್ಯ ಮಾಡಬೇಕೆಂದು ತಿಳಿಸಿದರು. ಗಣಿ ಲಾರಿಗಳ ಸಂಚಾರದಿಂದ ಉಂಟಾಗುವ ಧೂಳನ್ನು ನಿಯಂತ್ರಿಸಲು ನೀರನ್ನು ಸಿಂಪಡಿಸುವ ಕಾರ್ಯವನ್ನು ಮಾಡಬೇಕೆಂದು ತಿಳಿಸಿದರು. ಸ್ಥಳೀಯರಿಗೆ ಮೊದಲ ಆದ್ಯತೆ ನೀಡುವಂತೆ ತಿಳಿಸಿದರು.

3. **ಶ್ರೀ ಜಿ.ಎಸ್. ಸಿದ್ದಪ್ಪ, ಲಾರಿ ಸಂಘದ ಅಧ್ಯಕ್ಷರು, ಧರ್ಮಾಪುರ ಗ್ರಾಮ:-** ರವರು ಮಾತನಾಡುತ್ತಾ, ಧರ್ಮಾಪುರ ಗ್ರಾಮದ ಸುತ್ತಮುತ್ತ ಬಹಳ ಧೂಳು ಬರುತ್ತಿದ್ದು ನೀರು ಸಿಂಪಡಿಸುವಂತೆ ತಿಳಿಸಿದರು. ಗ್ರಾಮದ ವಿಧ್ಯಾವಂತ ಯುವಕರಿಗೆ ಉದ್ಯೋಗ ನೀಡುವಂತೆ ತಿಳಿಸಿದರು. ನಾರಿಹಳ್ಳವು ಪಕ್ಕದಲ್ಲಿರುವುದರಿಂದ ಕಾರ್ಖಾನೆ ನೀರು ನಾರಿಹಳ್ಳಕ್ಕೆ ಬಿಡಬಾರದೆಂದು ತಿಳಿಸಿದರು. ನಾರಿ ಹಳ್ಳದ ನೀರು ದನ ಕರುಗಳು ಕುಡಿಯುತ್ತವೆ, ಮುಂದೆ ಆಣೆಕಟ್ಟು ಇರುವುದಾಗಿ ತಿಳಿಸಿದರು. ಕಾರ್ಖಾನೆಯ ಕುಲುಷಿತ ನೀರು ನಾರಿ ಹಳ್ಳಕ್ಕೆ ಬೀಡದಂತೆ ಯಾವುದೇ ತೊಂದರೆ ಮಾಡದಂತೆ ಉದ್ದಿಮೆ ನಡೆಸಿದರೆ ಯೋಜನೆಗೆ ತಮ್ಮ ಆಕ್ಷೇಪವಿಲ್ಲವೆಂದು ತಿಳಿಸಿದರು.

4. **ಶ್ರೀಮತಿ ಆಶಾಲತಾ, ಪುರಸಭೆ ಮಾಜಿ ಅಧ್ಯಕ್ಷರು, ಧರ್ಮಾಪುರ ಗ್ರಾಮ:–** ರವರು ಮಾತನಾಡುತ್ತಾ, ಉದ್ದಿಮೆ ಸ್ಥಾಪನೆಯಾಗುತ್ತಿರುವುದು ತಮಗೆ ಸಂತೋಷ ಉಂಟಾಗುತ್ತಿರುವುದಾಗಿ ತಿಳಿಸಿದರು. ಸಂಡೂರು ತಾಲ್ಲೂಕಿನಲ್ಲಿ ಗಣಿ ಉದ್ದಿಮೆಗಳು ಬಿಟ್ಟು ಬೇರೆ ಉದ್ದಿಮೆಗಳಿರುವುದಿಲ್ಲವೆಂದು ತಿಳಿಸಿದರು. ಉದ್ದಿಮೆಯವರು ಪ್ರಸ್ತುತಿಯಲ್ಲಿ ತಿಳಿಸಿರುವಂತೆ ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸುವಂತೆ ತಿಳಿಸಿದರು, ಧೂಳು ಬರದಂತೆ ಕ್ರಮ ವಹಿಸುವಂತೆ ತಿಳಿಸಿದರು. ವಾಷಿಂಗ್ ಉದ್ಯಮದ ನೀರನ್ನು ನಾರಿಹಳ್ಳಕ್ಕೆ ಬಿಡಬಾರದೆಂದು ಅವರು ಆಗ್ರಹಿಸಿದರು. ಸಂಡೂರು ಜನತೆಯು ನಾರಿಹಳ್ಳದ ಸಂಸ್ಕರಿಸಿದ ನೀರನ್ನೆ ಬಳಸುತ್ತಿರುವುದಾಗಿ ತಿಳಿಸಿದರು. ಕುಲಷಿತ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸಬೇಕೆಂದು ತಿಳಿಸಿದರು. ಧರ್ಮಾಪುರ ಗ್ರಾಮದ ವಿಧ್ಯಾವಂತ ಯುವಕರಿಗೆ ಆದ್ಯತೆ ಮೇಲೆ ಉದ್ಯೋಗ ನೀಡಬೇಕೆಂದು ತಿಳಿಸಿದರು. ವೈಧ್ಯಕೀಯ ವ್ಯವಸ್ಥೆಗಾಗಿ ಸಣ್ಣ ಆಸ್ಪತ್ರೆಯನ್ನು ನಿರ್ಮಿಸುವಂತೆ ತಿಳಿಸಿದರು. ಶಾಲೆ, ದೇವಸ್ಥಾನಗಳಿಗೆ ಸಹಾಯ ಮಾಡಬೇಕೆಂದು ತಿಳಿಸಿದರು. ಉದ್ದಿಮೆಯನ್ನು ವೈಜ್ಞಾನಿಕ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ತಿಳಿಸಿದರು ಮತ್ತು ಸದರಿ ಯೋಜನೆಗೆ ಬೆಂಬಲ ನೀಡುವುದಾಗಿ ಹೇಳಿದರು.

5. **ಶ್ರೀ ನರರೆಡ್ಡಿ ವಿಶ್ವನಾಥ ರೆಡ್ಡಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಗಣಿ ಗುತ್ತಿಗೆ ಸಂಘ :–** ರವರು ಮಾತನಾಡುತ್ತಾ, ಸದರಿ ಪ್ರದೇಶದಲ್ಲಿ 2010 ರಿಂದ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ ಸ್ಥಗಿತವಾಗಿರುವುದಾಗಿ ತಿಳಿಸಿದರು. 2015 ರಿಂದ ಎಂ.ಎಂ.ಆರ್‌ಡಿ, ಆಕ್ಟ್ ರ ಸೆಕ್ಷನ್ 10 (ಎ) (1) ರ ಅನ್ವಯ ಹೊಸ ಗಣಿಗಾರಿಕೆ ಅವಕಾಶವಿಲ್ಲವೆಂದು ತಿಳಿಸಿದರು. ಸ್ಥಳೀಯರಿಗೆ ಉದ್ಯೋಗವಕಾಶ ನೀಡುವಂತೆ ಮತ್ತು ಪರಿಸರವನ್ನು ಕಾಪಾಡುವಂತೆ ತಿಳಿಸಿದರು.

6. **ಶ್ರೀ ಸತ್ಯನಾರಾಯಣ ಸಂಡೂರು:–** ರವರು ಮಾತನಾಡುತ್ತಾ, ಸದರಿ ಉದ್ದಿಮೆ ಸ್ಥಾಪನೆಗೆ ಯಾವುದೇ ತೊಂದರೆ ಇಲ್ಲ ಹಾಗೂ ಅನುಮತಿ ನೀಡಬೇಕೆಂದು ಕೋರಿದರು.

7. **ಶ್ರೀ ರಮೇಶ್, ಧರ್ಮಪುರ ಗ್ರಾಮ:-** ರವರು ಮಾತನಾಡುತ್ತಾ, ಸದರಿ ಉದ್ದಿಮೆಯವರು ಗಣಿ ನಡೆಯುತ್ತಿದ್ದ ಸಮಯದಲ್ಲಿ ಧರ್ಮಪುರ ಗ್ರಾಮಸ್ಥರಿಗೆ ಉದ್ಯೋಗ ನೀಡಿರುವುದಾಗಿ ತಿಳಿಸಿದರು. ಉದ್ದಿಮೆದಾರರು ಸ್ಥಳೀಯರಿಗೆ ಉದ್ಯೋಗ ನೀಡುತ್ತಾರೆಂಬ ಭರವಸೆ ಇರುವುದಾಗಿ ತಿಳಿಸಿದರು. ಸಂಡೂರಿನಲ್ಲಿ ರಕ್ತನಿಧಿ ಸಹ ಇರುವುದಿಲ್ಲವೆಂದು ತಿಳಿಸಿದರು. ಗಣಿಗಾರಿಕೆಯಿಂದ ಸ್ಥಳೀಯರಿಗೆ ತೊಂದರೆ ಉಂಟಾಗುತ್ತಿದ್ದರೂ ಸಹ ಮೂಲಭೂತ ಸೌಕರ್ಯಗಳು ದೊರೆಯುತ್ತಿಲ್ಲವೆಂದು ತಿಳಿಸಿದರು. ಉದ್ದಿಮೆ ಸ್ಥಾಪನೆಯಿಂದ ತಮಗೆ ಅನೂಕೂಲವಾಗುತ್ತದೆಂದು ತಿಳಿಸಿದರು.

8. **ಶ್ರೀ ರಾಮಕೃಷ್ಣ ಹೆಗಡೆ ದಲಿತ ಸಂಘರ್ಷ ಸಮಿತಿ :-** ರವರು ಮಾತನಾಡುತ್ತಾ, ಸ್ಥಳೀಯರಿಗೆ ವಿಶೇಷವಾಗಿ ಧರ್ಮಪುರ ಗ್ರಾಮಸ್ಥರಿಗೆ ಉದ್ಯೋಗ ನೀಡುವಂತೆ ತಿಳಿಸಿದರು. ಹೆಚ್.ಆರ್.ಜಿ. ಕಂಪನಿಯವರು ಗಣಿಗಾರಿಕೆ ಮಾಡುವ ಸಮಯದಲ್ಲಿ ಸ್ಥಳೀಯರಿಗೆ ಎಲ್ಲಾ ರೀತಿಯ ಸಹಾಯ ಮಾಡಿರುವುದಾಗಿ ತಿಳಿಸಿದರು. ಕಾರ್ಖಾನೆಯು ನಡೆಸುವ ಸಮಯದಲ್ಲಿ ಕಾನೂನುಗಳನ್ನು ಅನುಷ್ಠಾನಗೊಳಿಸುವಂತೆ ತಿಳಿಸಿದರು. ಉದ್ದಿಮೆಯಲ್ಲಿ ಸ್ಥಳೀಯರಿಗೆ ಉನ್ನತ ಹುದ್ದೆ ನೀಡುವಂತೆ ತಿಳಿಸಿದರು. ಸ್ಥಳೀಯ ಮೇಕ್ಯಾನಿಕ್, ಡಿಪ್ಲೋಮಾ ಮತ್ತು ಐಟಿಐ ಮಾಡಿರುವವರಿಗೆ ಉದ್ಯೋಗ ನೀಡುವಂತೆ ತಿಳಿಸಿದರು. ನಾರಿಹಳ್ಳವನ್ನು ಕುಲುಷಿತ ಮಾಡಬಾರದೆಂದು ತಿಳಿಸಿದರು. ಪುರಸಭೆಯ ಮುಖ್ಯಾಧಿಕಾರಿಗಳು, ತಮ್ಮ ವ್ಯಾಪ್ತಿಯಲ್ಲಿನ ಕಾರ್ಯಗಳನ್ನು ಪರಿಶೀಲಿಸಿ ಅನುಮತಿ ನೀಡಬೇಕೆಂದು ತಿಳಿಸಿದರು. ಸಣ್ಣ ಉದ್ದಿಮೆಯಾದರು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿದರು. ಉದ್ದಿಮೆ ಸ್ಥಾಪನೆಯಾದರೆ ಒಳ್ಳೆಯದು ಅವರು ಕಾನೂನು ಪಾಲಿಸಬೇಕೆಂದು ತಿಳಿಸಿದರು.

9. **ಶ್ರೀ ಬಸವರಾಜ, ಧರ್ಮಪುರ ಗ್ರಾಮ:-** ರವರು ಮಾತನಾಡುತ್ತಾ, ಹೆಚ್.ಆರ್.ಜಿ. ಗಣಿ ಮಾಲೀಕರು ಧರ್ಮಪುರ ಗ್ರಾಮಕ್ಕೆ ಗಣಿ ನಡೆಸುವ ಸಮಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಮಾಡಿ ಕೊಟ್ಟಿರುವುದಾಗಿ ತಿಳಿಸಿದರು. ಅನಿವಾರ್ಯ ಕಾರಣಗಳಿಂದ ಗಣಿಗಾರಿಕೆ ಸ್ಥಗಿತವಾಗಿರುವುದಾಗಿ ತಿಳಿಸಿದರು. ಧರ್ಮಪುರ ಗ್ರಾಮಕ್ಕೆ ಉದ್ಯೋಗವಕಾಶ ನೀಡುವಂತೆ ತಿಳಿಸಿದರು.

10. **ಶ್ರೀ ಆನಂದ ಬಳ್ಳಾರಿ ಜಿಲ್ಲಾ ಗಣಿಗಾರಿಕಾ ಕಾರ್ಮಿಕರ ಸಂಘ ಸಂಡೂರು:-** ರವರು ಮಾತನಾಡುತ್ತಾ, ತಮಗೆ ಕಾರ್ಖಾನೆ ಸ್ಥಾಪನಗೆ ಸಹಮತ ಇರುವುದಾಗಿ ತಿಳಿಸಿದರು. ಸದರಿ ಉದ್ದಿಮೆದಾರರ ಗಣಿಯಲ್ಲಿ ಕೆಲಸ ನಿರ್ವಹಿಸಿದ ಕಾರ್ಮಿಕರಿಗೆ ಈ ಉದ್ದಿಮೆಯಲ್ಲಿ ಉದ್ಯೋಗವಕಾಶ ನೀಡುವಂತೆ ತಿಳಿಸಿದರು ಮತ್ತು ಈ ಉದ್ದಿಮೆ ಸ್ಥಾಪಿಸಲು ಸಹಮತ ಇರುವುದಾಗಿ ತಿಳಿಸಿದರು.

11. **ಶ್ರೀ ಶಿವಲಿಂಗಪ್ಪ, ಡಾ: ಬಿ.ಆರ್.ಅಂಬೇಡ್ಕರ್ ಸಂಘದ ಕಾರ್ಮಿಕ ಅಧ್ಯಕ್ಷರು, ಸಂಡೂರು:-** ರವರು ಮಾತನಾಡುತ್ತ, ವಾಷಿಂಗ್ ಪ್ಲ್ಯಾಂಟ್ ಹಾಕುತ್ತಿರುವ ಉದ್ದಿಮೆದಾರರು ಸಂಡೂರು ತಾಲ್ಲೂಕಿಗೆ ಚಿರಪರಿಚಿತವೆಂದು ತಿಳಿಸಿದರು. ಸದರಿ ಉದ್ದಿಮೆಯವರು ಸ್ಥಳೀಯರಿಗೆ ಮೊದಲ ಆಧ್ಯತೆ ನೀಡುತ್ತಾರೆಂದು ತಿಳಿಸಿದರು. ಸ್ಥಳೀಯರ ಸಮಸ್ಯೆಗಳಿಗೆ ಉದ್ದಿಮೆದಾರರು ಸ್ಪಂದಿಸುವುದಾಗಿ ತಿಳಿಸಿದರು, ಕಂಪನಿಯು ಅಭಿವೃದ್ದಿಯಾದರೆ ಸ್ಥಳೀಯರಿಗೆ ಉದ್ಯೋಗವಕಾಶ ದೊರೆಯುವುದಾಗಿ ತಿಳಿಸಿದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದವರ ಜನ ಸಂಖ್ಯೆ ಹೆಚ್ಚಾಗಿರುವುದರಿಂದ ಅವರಿಗೆ ಭೂಮಿ ಸಹ ಕಡಿಮೆ ಇರುವುದರಿಂದ ಅವರಿಗೆ ಹೆಚ್ಚಿನ ಆಧ್ಯತೆ ನೀಡಬೇಕೆಂದು ಒತ್ತಾಯಿಸಿದರು.

12. **ಶ್ರೀ ರಾಘವೇಂದ್ರ ಎಸ್.ಪಿ. ಧರ್ಮಪುರ ಗ್ರಾಮ:-** ರವರು ಮಾತನಾಡುತ್ತ, ಧರ್ಮಪುರ ಗ್ರಾಮದ ಸುತ್ತಮುತ್ತಲಿನ ರೈತರ ಬಗ್ಗೆ ಕಾಳಜಿ ತೆಗೆದುಕೊಳ್ಳುವಂತೆ ಸಂಡೂರು ಗ್ರಾಮದ ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡುವಂತೆ ತಿಳಿಸಿದರು. ತಾವು ಸಹ ಡಿಪ್ಲೋಮಾ ಮಾಡಿ ನಿರುದ್ಯೋಗಿಯಾಗಿರುವುದಾಗಿ ತಿಳಿಸಿದರು. ಧರ್ಮಪುರದ ನಿವಾಸಿಯಾಗಿರುವುದಾಗಿ ತಿಳಿಸಿದರು. ಸ್ಥಳೀಯ ವಿಧ್ಯಾವಂತರಿಗೆ ಉದ್ಯೋಗ ದೊರೆಯುತ್ತಿಲ್ಲ ಇದಕ್ಕೆ ಕಾರಣವೇನೆಂಬುದು ಗೊತ್ತಿಲ್ಲವೆಂದು ಧೂಳು ಮತ್ತು ಕುಲುಷಿತ ನೀರು ಧರ್ಮಪುರ ಗ್ರಾಮದವರೇ ಕುಡಿದರು ಸಹ ಸ್ಥಳೀಯರಿಗೆ ಉದ್ಯೋಗ ನೀಡುತ್ತಿಲ್ಲವೆಂದು ತಿಳಿಸಿದರು. ವಯಸ್ಸಾದ ನಾಗರಿಕರಿಗೆ ವೈಧ್ಯಕೀಯ ಸೇವೆಯ ಸೌಲಭ್ಯವಿಲ್ಲವೆಂದು ತಿಳಿಸಿದರು. ಆರಾಧ್ಯದೇವ ನರಸಿಂಹ ಸ್ವಾಮಿ ದೇವಸ್ಥಾನದ ಉಳಿವಿಗಾಗಿ ಶ್ರಮ ಪಡುತ್ತಿರುವುದಾಗಿ ತಿಳಿಸಿದರು. ಬೇನಿಫಿಕೇಶನ್ ಪ್ಲ್ಯಾಂಟ್ ಮಾಡುವಾಗ ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ತಿಳಿಸಿದರು.

13. **ಶ್ರೀ ವಾಲ್ಮೀಕಿ ಅಮರೇಶ, ತಾಳೂರು ಗ್ರಾಮ, ಸಂಡೂರು:-** ರವರು ಮಾತನಾಡುತ್ತಾ, ಹೆಚ್.ಆರ್.ಜಿ. ಕಂಪನಿಯ ಬಗ್ಗೆ ಜನರಿಗೆ ಒಳ್ಳೆಯ ಅಭಿಪ್ರಾಯ ಇರುವುದಾಗಿ ತಿಳಿಸಿದರು ಮತ್ತು ಸದರಿ ಉದ್ದಿಮೆದಾರರು ಪರಿಸರಕ್ಕೆ ಹಾಗೂ ಕಾನೂನಿಗೂ ಮೋಸಮಾಡದೆ ಉದ್ದಿಮೆಗಳನ್ನು ನಡೆಸುತ್ತಿರುವುದಾಗಿ ತಿಳಿಸಿದರು. ಸ್ಥಳೀಯ ಕಾನೂನುಗಳನ್ನು ಉಲ್ಲಂಘಿಸದೆ ಉದ್ದಿಮೆ ನಡೆಸುತ್ತಾರೆಂದು ಜನರ ಅಭಿಪ್ರಾಯವೆಂದು ತಿಳಿಸಿದರು. ಸ್ಥಳೀಯ ಜನರ ಆರೋಗ್ಯ, ಶಿಕ್ಷಣದ ಬಗ್ಗೆ ಅನುಕೂಲ ಮಾಡಿಕೊಡಬೇಕೆಂದು ತಿಳಿಸಿದರು. ಸ್ಥಳೀಯರಿಗೆ ಅವರ ವಿದ್ಯಾಭ್ಯಾಸದ ಆಧಾರದ ಮೇಲೆ ಉದ್ಯೋಗವಕಾಶ ನೀಡಬೇಕೆಂದು ತಿಳಿಸಿದರು. ಸದರಿ ಉದ್ದಿಮೆಯ ಸ್ಥಾಪನೆಗೆ ತಮ್ಮ ವಿರೋಧವಿಲ್ಲವೆಂದು ತಿಳಿಸಿದರು.

14. **ಶ್ರೀ ಉಜ್ಜನೇಯ ತಾಲ್ಲೂಕು ರೈತ ಸಂಘದ ಅಧ್ಯಕ್ಷರು ಸಂಡೂರು:-** ರವರು ಮಾತನಾಡುತ್ತಾ, ಉದ್ದೇಶಿತ ಯೋಜನೆ ಸ್ಥಾಪನೆಯಾಗಬೇಕೆಂಬುವುದು ಎಲ್ಲರ ಅಭಿಪ್ರಾಯವೆಂದು ತಿಳಿಸಿದರು ಮತ್ತು ರೈತರಿಗೆ ತೊಂದರೆ ಉಂಟಾಗುತ್ತಿರುವ ಕುರಿತು ಯಾರು ಮಾತನಾಡುತ್ತಿಲ್ಲವೆಂದು ತಿಳಿಸಿದರು. ಧೂಳಿನ ಪರಿಹಾರ ಸರ್ಕಾರ ನೀಡುತ್ತಿಲ್ಲವೆಂದು ತಿಳಿಸಿದರು ಹಾಗೂ ಬೆಳೆಗಳ ಮೇಲೆ ಗಣಿಗಾರಿಕೆಯಿಂದ ಧೂಳು ಬೀಳುತ್ತಿರುವುದಾಗಿ ತಿಳಿಸಿದರು. ಜಿಂದಾಲ್ ಕಂಪನಿಯಲ್ಲಿ ಹೊರ ರಾಜ್ಯದವರಿಗೆ ಉದ್ಯೋಗ ನೀಡುತ್ತಿದ್ದು ಸ್ಥಳೀಯರಿಗೆ ಆದ್ಯತೆ ನೀಡುತ್ತಿಲ್ಲವೆಂದು ತಿಳಿಸಿದರು. ಕಲುಷಿತ ನೀರನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಬೇಕೆಂದು ತಿಳಿಸಿದರು. ನಾರಿಹಳ್ಳದ ನೀರು ಸಂಡೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಆಗುತ್ತಿದ್ದು ಆದುದರಿಂದ ನಾರಿಹಳ್ಳಕ್ಕೆ ನೀರು ಬೀಡದಂತೆ ಒತ್ತಾಯಿಸಿದರು. ಕುಲುಷಿತ ನೀರನ್ನು ಸಂಸ್ಕರಿಸಿ ಮರು ಬಳಕೆ ಮಾಡುವಂತೆ ತಿಳಿಸಿದರು. ಫಲವತ್ತಾದ ಭೂಮಿ ಇದ್ದರೂ ಸಹ ಮಳೆಗಾಲದಲ್ಲಿ ಬೆಳೆ ಬೆಳೆಯಲು ಸಾಧ್ಯವಾಗಿಲ್ಲವೆಂದು ತಿಳಿಸಿದರು. ರೈತರಿಗೆ ನೀರಾವರಿ ಸೌಲಭ್ಯ, ನೀರಾವರಿ ಯೋಜನೆಗಳನ್ನು ಒದಗಿಸಬೇಕೆಂದು ಹೇಳಿದರು. ರೈತರ ಮಕ್ಕಳಿಗೆ ಕೌಶಲ್ಯ ತರಬೇತಿ ನೀಡುವಂತೆ ತಿಳಿಸಿದರು. ಸಾವಯವ ಕೃಷಿ, ಗಿಡ ಮೂಲಿಕೆಗಳನ್ನು ರೈತರಿಗೆ ನೀಡುವಂತೆ ತಿಳಿಸಿದರು. ಸದರಿ ಉಧ್ಯಮ ಸ್ಥಾಪಿಸಲು ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದರು. ಅಕ್ಕ-ಪಕ್ಕದ ರೈತರಿಗೆ ಧೂಳಿನ ಪರಿಹಾರ ನೀಡುವಂತೆ ಒತ್ತಾಯಿಸಿದರು.

15. **ಶ್ರೀ ಶಿವಣ್ಣ ಧರ್ಮಪುರ ಗ್ರಾಮ:-** ರವರು ಮಾತಾನಾಡುತ್ತಾ, ಮಳೆಗಾಲ ಚೆನ್ನಾಗಿ ಆಗಿರುವುದಾಗಿ ತಿಳಿಸಿದರು. ಧೂಳಿನ ಸಮಸ್ಯೆಯಿಂದ ರೈತರ ಬೆಳೆ ಕೈಗೆ ಸಿಗುತ್ತಿಲ್ಲವೆಂದು ತಿಳಿಸಿದರು. ಧೂಳಿನಿಂದಾಗಿ ಬೀಜ, ಗೊಬ್ಬರ ಹಾಕಿದರು ಸಹ ಬೆಳೆ ಚೆನ್ನಾಗಿ ಬರುತ್ತಿಲ್ಲವೆಂದು ತಿಳಿಸಿದರು.

ಧರ್ಮಪುರ ಸುತ್ತಮುತ್ತಲಿನಲ್ಲಿ ನಾಲ್ಕು ಗಣಿಗಳಿದ್ದರು ಗ್ರಾಮದಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲವೆಂದು ಈ ಬಗ್ಗೆ ಸದಸ್ಯರು ಮತ್ತು ಗ್ರಾಮಸ್ಥರು ಹೇಳುತ್ತಿಲ್ಲವೆಂದು ತಿಳಿಸಿದರು. ಕುಡಿಯುವ ನೀರಿಗಾಗಿ 2 ಕಿಮಿ ದೂರದ ಸಂಡೂರಿಗೆ ಹೋಗಿ ಕುಡಿಯಲು ನೀರು ತರುತ್ತಿರುವುದಾಗಿ ತಿಳಿಸಿದರು. ವೃದ್ದರು ಹಾಗೂ ಮಹಿಳೆಯರು ನೀರು ತರಲು ಪರದಾಡುವಂತಾಗಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

16. **ಶ್ರೀ ಎಂ. ಚನ್ನಬಸವಯ್ಯ ಸಂಡೂರು ತಾಲ್ಲೂಕಿನ ಸಂಚಾಲಕರು:-** ರವರು ಮಾತನಾಡುತ್ತಾ, ಸದ್ಯದ ಪರಿಸ್ಥಿತಿಯಲ್ಲಿ ಉದ್ಯೋಗದ ಅವಶ್ಯಕತೆ ಬಹಳಷ್ಟಿರುವುದಾಗಿ ತಿಳಿಸಿದರು. ಕರೋನಾ ಆತಂಕದಿಂದ ಇನ್ನೂ ಹೊರಬಂದಿರುವುದಿಲ್ಲವೆಂದು ತಿಳಿಸಿದರು. ಜನ ಜೀವನದ ಜೊತೆ ಜೀವರಾಶಿಗಳ ಯೋಚನೆ ಮಾಡಬೇಕೆಂದು ತಿಳಿಸಿದರು. ಸ್ಥಳೀಯರಿಗೆ ಉದ್ಯೋಗ ಹಾಗೂ ರೈತರ ಸಮಸ್ಯೆಗಳಿಗೆ ಸ್ಪಂದಿಸುವಂತೆ ತಿಳಿಸಿದರು, ಉದ್ಯೋಗವಕಾಶ ದೊರೆಯುವುದರಿಂದ ಉದ್ದಿಮೆ ಸ್ಥಾಪನೆ ಮಾಡಬೇಕೆಂದು ತಿಳಿಸಿದರು. ಸಂಡೂರು ಉಕ್ಕು ಉತ್ಪಾದನೆಗಾಗಿ ಹಾಗು ದೊಡ್ಡ ಉದ್ದಿಮೆಗಳು ದೇಶದ ಗಮನವನ್ನು ಸೆಳೆದಿರುವುದಾಗಿ ತಿಳಿಸಿದರು. ಆದರೆ ಉದ್ಯೋಗಕ್ಕೆ ಸಂಬಂಧಿಸಿದಂತೆ ಇನ್ನೂ ಸಮಸ್ಯೆಗಳಿರುವುದಾಗಿ ತಿಳಿಸಿದರು. ಸಂಡೂರು ಉತ್ತರ ಕರ್ನಾಟಕದ ಮಲೆನಾಡು ಆದರೂ ಸಹ ವ್ಯವಸಾಯ ಹಾಗೂ ಉದ್ಯೋಗದಲ್ಲಿ ಸಂಪೂರ್ಣ ನಿರ್ಲಕ್ಷಕ್ಕೆ ಒಳಗಾಗಿರುವುದಾಗಿ ತಿಳಿಸಿದರು. ಸರ್ಕಾರದ ಅಂಕಿ-ಅಂಶಗಳ ಪ್ರಕಾರ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕಿನ ಪಟ್ಟಿಯಲ್ಲಿರುವುದಾಗಿ ತಿಳಿಸಿದರು. ಅಪೌಷ್ಟಿಕತೆ, ಶಿಕ್ಷಣ ಮತ್ತು ಅಭಿವೃದ್ದಿಯಲ್ಲಿ ಅಂತ್ಯಂತ ಹಿಂದುಳಿರುವುದಾಗಿ ತಿಳಿಸಿದರು. ರಾಜ್ಯದ ರಾಜಧನದಲ್ಲಿ ಸಂಡೂರಿನ ಕೊಡುಗೆ ಇರುವುದಾಗಿ ತಿಳಿಸಿದರು. ಕುಡಿಯುವ ನೀರಿನ ಮತ್ತು ವಾಯು ಮಾಲಿನ್ಯದ ಸಮಸ್ಯೆಗಳಿರುವುದಾಗಿ ತಿಳಿಸಿದರು. ಕೈಗಾರಿಕೆಯಿಂದ ಅನಾಹುತಗಳಾಗಿರುವುದಾಗಿ ಆದರೂ ಸಹ ಕೈಗಾರಿಕೆಗಳು ಬಂದಾಗ ಸ್ವಾಗತಿಸುವುದಾಗಿ ತಿಳಿಸಿದರು. ಗ್ರಾಮವನ್ನು ಸ್ಥಳಾಂತರಿಸಲು ಸಾರ್ವಜನಿಕ ಸಭೆ ನಡೆಸುವ ನಿರ್ಮಾಣಗಳಾಗುತ್ತಿರುವುದಾಗಿ ತಿಳಿಸಿದರು. ಕೈಗಾರಿಕೆಗಳು ಸ್ಥಾಪನೆ ಸಮಯದಲ್ಲಿ ತೋರಿಸುವ ಉತ್ಸುಕತೆ ಜನರ ಬಗ್ಗೆ ಇರುವ ಕಾಳಜಿ ಕೈಗಾರಿಕೆ ಸ್ಥಾಪನೆಯಾದನಂತರ ಮರೆಯುವುದಾಗಿ ತಿಳಿಸಿದರು. ಅಧಿಕಾರಿಗಳು ಸಹ ಈ ಕುರಿತು ಗಮನ ಹರಿಸುವುದಿಲ್ಲವೆಂದು ತಿಳಿಸಿದರು. ಸದರಿ ಕೈಗಾರಿಕೆಯಲ್ಲಿ 46 ಜನರಿಗೆ ಕೆಲಸ ನೀಡುವುದಾಗಿ ತಿಳಿಸಿರುತ್ತಾರೆ. ಸಂಡೂರು ತಾಲ್ಲೂಕಿನಲ್ಲಿ ಸುಮಾರು 3080 ನಿರುದ್ಯೋಗಿಗಳಿರುವುದಾಗಿ ತಿಳಿಸಿದರು. ಸದರಿ ಉದ್ದಿಮೆಯವರು 46 ಜನರಿಗೆ ಉದ್ಯೋಗವನ್ನು ನೀಡುತ್ತಿರುವುದನ್ನು ಸ್ವಾಗತಿಸಿದರು. ಸಂಡೂರಿನಲ್ಲಿ ಕುಡಿಯುವ ನೀರು ಪ್ರತಿ ವಾರಕ್ಕೆ ಒಂದು ಸಲ ಬಿಡುತ್ತಿರುವುದಾಗಿ ತಿಳಿಸಿದರು. ನಾರಿಹಳ್ಳಕ್ಕೆ ತುಂಗಬದ್ರಾ ನದಿಯಿಂದ ನೀರು ಬರುತ್ತಿದ್ದರು ಸಹ ಸಂಡೂರಿಗೆ ನೀರಿನ ಸಮಸ್ಯೆ ಇರುವುದಾಗಿ ತಿಳಿಸಿದರು. ಡಿ.ಎಂ.ಎಫ್. ನ 60% ಹಣವನ್ನು ಸಂತ್ರಸ್ಥರಿಗೆ ಖರ್ಚು ಮಾಡಬೇಕೆಂದು ನಿಯಮವಿದ್ದರು ಸಹ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿರುವುದಿಲ್ಲವೆಂದು ತಿಳಿಸಿದರು. ಡಿ.ಎಂ.ಎಫ್. ಹಣವನ್ನು ಮೂಲಭೂತ ಸೌಕರ್ಯಗಳಿಗೆ ಉಪಯೋಗಿಸುವಂತೆ ತಿಳಿಸಿದರು. ಕೈಗಾರಿಕೆ ಸ್ಥಾಪನೆಯಾದರೆ ಮರಣಶಾಸನ ಎಂದು ತಿಳಿಸಿದರು. ಗಣಿ ಚಟುವಟಿಕೆಯಿಂದ ಈಗಾಗಲೇ ಧೂಳು ಬರುತ್ತಿದ್ದು ಮತ್ತೆ ಈ ತರಹದ ಕೈಗಾರಿಕೆಗಳು ಪ್ರಾರಂಭವಾದರೆ ಜೀವನವನ್ನು ಕಳೆದುಕೊಳ್ಳುವುದಾಗಿ ತಿಳಿಸಿದರು. ತಾತ್ಕಾಲಿಕ ಸುಖಕ್ಕಾಗಿ ತಮ್ಮ ಮಕ್ಕಳ ಮುಂದಿನ ಭವಿಷ್ಯ ಕಳೆದುಕೊಳ್ಳುತ್ತಿರುವುದಾಗಿ ತಿಳಿಸಿದರು. ಈ ಬಗ್ಗೆ ಪರಿಶೀಲಿಸಬೇಕೆಂದು ತಿಳಿಸಿದರು. ವನ್ಯಜೀವಿಗಳು ನಾಶಾವಾಗುತ್ತಿರುವ ಸಂದರ್ಭಗಳು ತಾವು ನೋಡುತ್ತಿರುವುದಾಗಿ ತಿಳಿಸಿದರು. ಸದರಿ ಉದ್ದಿಮೆಗೆ 500 ಕೆ.ಎಲ್.ಡಿ. ನೀರಿನ ಅವಶ್ಯಕತೆ ಇರುವುದಾಗಿ ಉದ್ದಿಮೆದಾರರು ತಿಳಿಸಿರುತ್ತಾರೆ. ಸದರಿ ನೀರಿನ ಮೂಲ ಅಂತರ್ಜಲವಾಗಿರುವುದರಿಂದ ಇದು ಜನರಿಗೆ ತೊಂದರೆ ಉಂಟಾಗುತ್ತದೆ ಎಂದು ತಿಳಿಸಿದರು.

ಸದರಿ ಪ್ರದೇಶದಲ್ಲಿ ಅಂತರ್ಜಲ ಕುಸಿತ ಕಾಣುತ್ತಿರುವುದಾಗಿ ತಿಳಿಸಿದರು. ಕೃಷಿ ವಲಯದಲ್ಲಿಯು ಸಹ ಇಳಿಮುಖವಾಗುತ್ತಿರುವುದಾಗಿ ತಿಳಿಸಿದರು. ಉದ್ದಿಮೆದಾರರು ನೀರಿನ ಮೂಲಕ್ಕಾಗಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ವಿದ್ಯುತ್ ಸಹ ಸಂಪೂರ್ಣವಾಗಿ ನೀಡುತ್ತಿಲ್ಲವೆಂದು ತಿಳಿಸಿದರು. ವಿದ್ಯುತ್ ಕ್ಷಾಮದ ಸಮಯದಲ್ಲಿ ಈ ತರಹದ ಉದ್ದಿಮೆಗಳಿಗೆ ವಿದ್ಯುತ್ ನೀಡಿದರೆ ಜನರಿಗೆ ವಿದ್ಯುತ್ ಸಮಸ್ಯೆ ಉಂಟಾಗುವುದಾಗಿ ತಿಳಿಸಿದರು. ಅರಣ್ಯ ಕಾಯ್ದೆ ಅಡಿಯಲ್ಲಿ ಸುಮಾರು 3992 ಜನ ಅರ್ಜಿಗಳನ್ನು ಸಲ್ಲಿಸಿದ್ದು ಜಂಟಿ ಸರ್ವೆ ಆಗಿರುವುದಿಲ್ಲವೆಂದು ತಿಳಿಸಿದರು. ಬಗರ ಹುಕಂಗಾಗಿ ಸುಮಾರು 9000 ಜನ ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿದರು. ಸಿ.ಎಸ್.ಆರ್. ಹಣವು ಸಂಡೂರ ತಾಲ್ಲೂಕಿಗೆ ಬಳಕೆಯಾಗಬೇಕೆಂದು ತಿಳಿಸಿದರು. ನಿರುದ್ಯೋಗಿಗಳಿಗೆ ಸರೋಜಿನಿ ಮಹರ್ಷಿ ವರದಿ ಅನ್ವಯ ಉದ್ಯೋಗ ನೀಡಬೇಕೆಂದು ತಿಳಿಸಿದರು. ರೈತರಿಗೆ ಧೂಳಿನ ಪರಿಹಾರ ನೀಡುವಂತೆ ಆಗ್ರಹಿಸಿದರು. ಬೆಳೆಯ ಪರಿಹಾರವನ್ನು ಡಿ.ಎಂ.ಎಫ್. ನಿಂದ ಅಥವಾ ಇನ್ಯಾವುದೊ ಮೂಲದಿಂದ ನೀಡಬೇಕೆಂದು ತಿಳಿಸಿದರು.

17. **ಶ್ರೀ ರಾಜು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷರು ಸಂಡೂರು ತಾಲ್ಲೂಕು:-** ರವರು ಮಾತನಾಡುತ್ತ 2010 ರಲ್ಲಿ ಗಣಿ ಉದ್ದಿಮೆಗಳು ಮುಚ್ಚಿದಾಗಿನಿಂದ ಹೋರಾಟ ಮಾಡಿಕೊಂಡು ಬಂದಿರುವುದಾಗಿ ತಿಳಿಸಿದರು. ಗಣಿಗಾರಿಕೆ ಸ್ಥಗಿತಗೊಂಡಾಗ ಸುಪ್ರೀಂ ಕೋರ್ಟ ಮತ್ತು ಹಸಿರು ಪೀಠದಿಂದ ಅಧಿಕಾರಿಗಳ ಕೇಂದ್ರ ತಂಡವು ಬಂದಾಗ ವಿಚಾರಣೆ ಸಭೆ ಕರೆದಿರುವುದಾಗಿ ತಿಳಿಸಿದರು. ವಿಚಾರಣೆ ಸಭೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದರೆ ಕಾನೂನು ಕ್ರಮ ಕೈಗೊಳ್ಳುವಂತೆ ಹಾಗೂ ಕಾನೂನು ಅಡಿಯಲ್ಲಿ ಗಣಿಗಾರಿಕೆ ನಡೆಸಿದರೆ ಮರು ಗಣಿಗಾರಿಕೆ ಮಾಡಲು ಅನುವು ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿಯವರಿಗೆ ಮನವಿ ಮಾಡಿರುವುದಾಗಿ ತಿಳಿಸಿದರು. ಸಂಡೂರು ತಾಲ್ಲೂಕಿನಲ್ಲಿ ಪ್ರಸ್ತುತ 33 ಗಣಿಗಾರಿಕೆಗಳು ನಡೆಯುತ್ತಿರುವುದಾಗಿ ತಿಳಿಸಿದರು. ಸದರಿ ಉದ್ದೇಶಿತ ಯೋಜನೆಗೆ ಸ್ಥಳೀಯರ ಸಹಮತಿ ಇರುವುದಾಗಿ ತಿಳಿಸಿದರು. ಸಂಡೂರು ತಾಲ್ಲೂಕಿನಲ್ಲಿ ಗಣಿಗಾರಿಕೆಗಳಿದ್ದು ಉದ್ದಿಮೆಗಳು ಇರುವುದಿಲ್ಲವೆಂದು ತಿಳಿಸಿದರು. ಇನ್ನೂ ಹೆಚ್ಚಿನ ಉದ್ದಿಮೆಗಳು ಸಂಡೂರು ತಾಲ್ಲೂಕಿನಲ್ಲಿ ಸ್ಥಾಪಿಸುವಂತೆ ಹಾಗೂ ನಿರುದ್ಯೋಗ ಸಮಸ್ಯೆಗಳು ಕಡಿಮೆಯಾಗುತ್ತವೆ ಎಂದು ತಿಳಿಸಿದರು. ಸದರಿ ಉದ್ದಿಮೆ ಸ್ಥಾಪನೆಗೆ ಸಂಡೂರು ತಾಲ್ಲೂಕಿನ ಸಂಘ ಸಂಸ್ಥೆಗಳು ಹಾಗು ಸ್ವಯಂ ಸೇವಾ ಸಂಸ್ಥೆಗಳ ಬೆಂಬಲವಿರುವುದಾಗಿ ತಿಳಿಸಿದರು. ಸ್ಥಳೀಯರಿಗೆ ಉದ್ಯೋಗ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ತಿಳಿಸಿದರು ಮತ್ತು ಧರ್ಮಾಪುರ ಗ್ರಾಮದ ನಿರುದ್ಯೋಗ ಯುವಕರಿಗೆ ಉದ್ಯೋಗ ಕಲ್ಪಿಸಿಕೊಡುವಂತೆ ತಿಳಿಸಿದರು.

18. **ಶ್ರೀ ಅಲಂದರ ಪಾಷಾ ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ಕಾರ್ಯದರ್ಶಿ:-** ರವರು ಮಾತನಾಡುತ್ತ ಎಲ್ಲಾ ಸಾರ್ವಜನಿಕರು ನಿರುದ್ಯೋಗ ಸಮಸ್ಯೆ ಬಗ್ಗೆ ಹೆಚ್ಚು ಒತ್ತು ಕೊಟ್ಟಿರುವುದಾಗಿ ತಿಳಿಸಿದರು. ರೈತಾಪಿ ವರ್ಗದವರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಗಮನ ಹರಿಸುವಂತೆ ತಿಳಿಸಿದರು. ಅರಣ್ಯ ಇಲಾಖೆಯವರು 2013 ರಲ್ಲಿ ಜಂಟಿ ಸರ್ವೆ ಮಾಡದೆ ರೈತರನ್ನು ಒಕ್ಕಲೆಬ್ಬಿಸಿರುವುದಾಗಿ ತಿಳಿಸಿದರು. ಸ್ಥಳೀಯರು ಉದ್ಯೋಗದ ಬಗ್ಗೆ ಮಾತ್ರ ಯೋಚನೆ ಮಾಡುತ್ತಿದ್ದು ಮುಂದೆ ತಮ್ಮ ಮಕ್ಕಳಿಗೆ ಮತ್ತು ಮನುಕೂಲಕ್ಕೆ ಆಗುವಂತಹ ಸಮಸ್ಯೆಯ ಬಗ್ಗೆ ಒತ್ತು ಕೊಡುತ್ತಿಲ್ಲವೆಂದು ತಿಳಿಸಿದರು. ಧೂಳಿನಿಂದ ಕರೋನಾ ಮತ್ತು ಟಿ.ಬಿ.ಯಂತಹ ರೋಗಗಳು ಬರುತ್ತಿರುವುದಾಗಿ ತಿಳಿಸಿದರು. ಸದರಿ ಉದ್ಯಮ ಸ್ಥಾಪನೆಯಾದರೆ ಇನ್ನೂ ಬಹಳ ಸಮಸ್ಯೆ ಉಂಟಾಗುವುದಾಗಿ ತಿಳಿಸಿದರು. ಸುಲ್ತಾನಪುರ ಗ್ರಾಮ ಸ್ಥಳಾಂತರ ಮಾಡುತ್ತಿರುವ ರೀತಿಯಲ್ಲಿ ಅದೇ ರೀತಿಯ ಪರಿಸ್ಥಿತಿ ಉದ್ಭವವಾಗುತ್ತದೆ ಎಂದು ತಿಳಿಸಿದರು. ಇಲ್ಲಿನ ಪರಿಸರ ತುಂಬಾ ಕೆಟ್ಟು

ಹೋಗಿರುವುದರಿಂದ ಈಗಿರುವ ಸ್ಥಳ ಪರಿಶೀಲನೆ ಮಾಡಿ ಬೇರೆ ಕಡೆ ಉದ್ಯಮ ಸ್ಥಾಪಿಸುವಂತೆ ತಿಳಿಸಿದರು.

19. **ಶ್ರೀ ರೇವಣ್ಣ ಧರ್ಮಾಪುರ ಗ್ರಾಮ:-** ರವರು ಮಾತನಾಡುತ್ತಾ, ತಾವು ಮೂಲತ ರೈತರೆಂದು ತಿಳಿಸಿದರು ಹಾಗೂ ಸದರಿ ಉದ್ದಿಮೆ ಸ್ಥಾಪಿಸಲು ತಮ್ಮ ಬೆಂಬಲ ಇರುವುದಾಗಿ ತಿಳಿಸಿದರು.

20. **ಶ್ರೀ ಮೂಲಿಮನೆ ಈರಣ್ಣ ರಾಜ್ಯ ರೈತ ಸಂಘ ಪ್ರೋ. ನಂಜುಂಡಸ್ವಾಮಿ ಸ್ಥಾಪಿತದ ತಾಲ್ಲೂಕು ಅಧ್ಯಕ್ಷ-** ರವರು ಮಾತನಾಡುತ್ತಾ, ಸದರಿ ಯೋಜನೆಯ ಪ್ರದೇಶದ ಸರ್ವೆ ನಂಬರ್ ಗುರುತಿಸಿದ್ದಾರೆ ಆದರೆ ಧರ್ಮಾಪುರ ಸೇರಿದಂತೆ 15 ಹಳ್ಳಿಗಳು ಸರ್ವೆ ಸೆಟ್ಲಮೆಂಟ್ ಆಗಿರುವುದಿಲ್ಲವೆಂದು ತಿಳಿಸಿದರು. ಸದರಿ ಸ್ಥಳಕ್ಕೆ ನಕಾಶೇ ಸೇರಿದಂತೆ ದಾಖಲೆಗಳಿಲ್ಲವೆಂದು ಹಾಗೂ ಸದರಿ ಸ್ಥಳವು ಸಹ ಅನ್ ಸೆಟ್ಲಮೆಂಟ್ ಸ್ಥಳದಲ್ಲಿ ಉದ್ದಿಮೆ ಸ್ಥಾಪಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದವರು ಈ 15 ಹಳ್ಳಿಗಳಲ್ಲಿ ಸುಲಭವಾಗಿ ಭೂಮಿಯನ್ನು ವಶಪಡಿಸಿಕೊಳ್ಳುತ್ತಿರುವುದಾಗಿ ತಿಳಿಸಿದರು. ಕುಮಾರಸ್ವಾಮಿ ದೇವಸ್ಥಾನ, ಪಾರ್ವತಿ ದೇವಸ್ಥಾನ 10 ಕೀ.ಮಿ ವ್ಯಾಪ್ತಿಯಲ್ಲಿ ಬರುವುದಾಗಿ ತಿಳಿಸಿದರು. ನರಸಿಂಹ ಸ್ವಾಮಿ ದೇವಸ್ಥಾನ, ಗಂಡಿ ಮಾರೆಮ್ಮ ದೇವಸ್ಥಾನಗಳು ಪುರಾತತ್ವ ಇಲಾಖೆಗೆ ಒಳಪಟ್ಟಿರುವುದಾಗಿ ತಿಳಿಸಿದರು. ಇಂತಹ ದೇವಸ್ಥಾನಗಳು ಇದ್ದರೂ ಸಹ ಈ ಸ್ಥಳದಲ್ಲಿ ಅನುಮತಿ ನೀಡುತ್ತಿರುವುದಾಗಿ ತಿಳಿಸಿದರು. ಔಷದಿ ಸಸ್ಯಗಳು ಸಹ ಈ ಸ್ಥಳದಲ್ಲಿ ಇರುವುದಾಗಿ ತಿಳಿಸಿದರು. ಕಾಡು ಪ್ರಾಣಿ, ನಾಡ ಪಕ್ಷಿ ಈ ಸ್ಥಳದಲ್ಲಿರುವುದಾಗಿ ತಿಳಿಸಿದರು. ಸಂಡೂರು ತಾಲ್ಲೂಕಿನಲ್ಲಿ ಬೃಹತ್ ಉದ್ಯಮಗಳು ಮತ್ತು ಗಣಿ ಉದ್ಯಮಗಳಿದ್ದರು ನಿರುದ್ಯೋಗ ಸಮಸ್ಯೆ ಇರುವುದಾಗಿ ತಿಳಿಸಿದರು. ಉದ್ದಿಮೆಗಳು ಹೋರಾಟಗಾರರ ಮೇಲೆ ಜಾತಿ ನಿಂಧನೆ / ಇನ್ನಿತರ ಪ್ರಕರಣಗಳನ್ನು ದಾಖಲಿಸುತ್ತಿರುವುದಾಗಿ ತಿಳಿಸಿದರು. ಸದರಿ ಯೋಜನೆಗೆ ತಮ್ಮ ವಿರೋಧ ವಿರುವುದಾಗಿ ತಿಳಿಸಿದರು. ಸದರಿ ಸ್ಥಳದ 150 ಮೀಟರ್ ಒಳಗಡೆ ನಾರಿಹಳ್ಳವಿದ್ದು 300 ಮೀಟರ್ ಅಂತರದಲ್ಲಿ ಕಾಯ್ದಿಟ್ಟ ಅರಣ್ಯ ಪ್ರದೇಶವಿರುವುದಾಗಿ ತಿಳಿಸಿ ತಮ್ಮ ವಿರೋಧ ವ್ಯಕ್ತ ಪಡಿಸಿದರು. ಸಿ ಕೆಟಗರಿ ಗಣಿಗಾರಿಕೆ ಬಗ್ಗೆ ಇನ್ನೂ ಕೋರ್ಟನಲ್ಲಿ ಕಾನೂನು ಸಮರ ನಡೆಯುತ್ತಿದ್ದರು ಸಹ ಹೇಗೆ ನಿರ್ಧಾರ ತೆಗೆದುಕೊಳ್ಳಲು ಸಾಧ್ಯ ಎಂದು ತಿಳಿಸಿದರು. ಈ ಬಗ್ಗೆ ಸೂಕ್ತ ತನಿಖೆ ಮತ್ತು ಪರಿಶೀಲನೆ ಮಾಡುವಂತೆ ಆಗ್ರಹಿಸಿದರು. ಕರಡು ಯೋಜನೆಯ ಪ್ರತಿ ತಾವು ಪಡೆದುಕೊಂಡಿದ್ದು ಸದರಿ ಯೋಜನೆ ರದ್ದುಗೊಳಿಸದಿದ್ದರೆ ತಾವು ನ್ಯಾಯಾಲಯದ ಮೆಟ್ಟಿಲೇರುವುದಾಗಿ ತಿಳಿಸಿದರು ಮತ್ತು ಸದರಿ ಯೋಜನೆಗೆ ತಮ್ಮ ಸಂಪೂರ್ಣ ವಿರೋಧವಿರುವುದಾಗಿ ತಿಳಿಸಿದರು.

21. **ಶ್ರೀ ಎಂ. ಸತೀಶ ಸಂಡೂರು:-** ರವರು ಮಾತನಾಡುತ್ತಾ, ಸದರಿ ಯೋಜನೆಗೆ ತಮ್ಮ ಸಂಪೂರ್ಣ ಸಹಮತ ಇರುವುದಾಗಿ ತಿಳಿಸಿದರು. ಸದರಿ ಉದ್ದಿಮೆದಾರರು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದಾಗಿ ತಿಳಿಸಿದರು. ಸುಧಾರಿತ ತಂತ್ರಜ್ಞಾನವನ್ನು ಬಳಸಿ ಸಂಸ್ಕರಣಾ ಘಟಕವನ್ನು ಸ್ಥಾಪಿಸುವಂತೆ ತಿಳಿಸಿದರು. ನಾರಿಹಳ್ಳದಲ್ಲಿ ಬರುವ ಕೆಸರನ್ನು ಸಹ ತಡೆಗಟ್ಟಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಸಂಸ್ಕರಿಸಿದ ನೀರನ್ನು ಹೊರಗೆ ಹೋಗದಂತೆ ಪುನ: ಬಳಕೆ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಪರಿಣಾಮ ಬೀರದ ರೀತಿಯಲ್ಲಿ ಉದ್ದಿಮೆಯನ್ನು ನಡೆಸಿಕೊಂಡು ಹೋಗುವಂತೆ ತಿಳಿಸಿದರು. ಈ ತರಹದ ಉದ್ದಿಮೆಗೆ ಸಹಮತ ನೀಡುವಂತೆ ತಿಳಿಸಿದರು ಮತ್ತು ಸದರಿ ಉದ್ದಿಮೆಗೆ ತಮ್ಮ ಅನುಮತಿ ಇರುವುದಾಗಿ ತಿಳಿಸಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ) ಇದನ್ನು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ಇವರು ಮುಖಾಂತರ ಕಳುಹಿಸಿಕೊಡಲಾಗುವದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಶ್ರೀ ಕೆ.ರಾಜು**
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ ಬಳ್ಳಾರಿ

**ಶ್ರೀ ಪಿ.ಎಸ್.ಮಂಜುನಾಥ**,ಕ.ಆ.ಸೇ(ಹಿರಿಯ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ
ಸಮಿತಿ, ಬಳ್ಳಾರಿ.

## ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.
3. ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಪ್ರಜಾವಾಣಿ (ಕನ್ನಡ) ಹಾಗೂ ದಿ ಹಿಂದೂ (ಆಂಗ್ಲ) ಗಳಲ್ಲಿ ದಿನಾಂಕ 22-12-2021 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಕನ್ನಡ ನಾಡು" ಪತ್ರಿಕೆಯಲ್ಲಿ ದಿನಾಂಕ: 24-11-2021 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.
4. ಸಾರ್ವಜನಿಕರಿಂದ ಪ್ರಾದೇಶಿಕ ಕಛೇರಿ ಬಳ್ಳಾರಿಯಲ್ಲಿ ಸ್ವೀಕೃತಿಯಾದ ಒಟ್ಟು 05 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿದ್ದು, ಪರಿಸರ ಸಾರ್ವಜನಿಕ ಸಭೆಯ ಸಮಯದಲ್ಲಿ ಒಟ್ಟು 35 ಲಿಖಿತ ಹೇಳಿಕೆ/ ಆಕ್ಷೇಪಣೆಗಳುಸ್ವೀಕೃತಿಯಾಗಿರಯತ್ತವೆ ಅವುಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.
5. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ20-12-2021 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 22-12-2021 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-5** ರಂತೆ ಲಗತ್ತಿಸಿದೆ.
6. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿನಾಂಕ 20-12-2021 ಮತ್ತು 21-12-2021ರಂದು ಕರಪತ್ರಗಳನ್ನು ವಿತರಿಸಲಾದ ಮತ್ತು ಧ್ವನಿವರ್ಧಕಗಳ ಮುಖೇನ ಯೋಜನಾ ಸ್ಥಳದ ಸುತ್ತಮುತ್ತಲ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಪ್ರಚಾರ ಮಾಡಲಾದ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.
7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.
8. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ.

ಶ್ರೀ ಕೆ.ರಾಜು
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ

**ಶ್ರೀ ಪಿ.ಎಸ್.ಮಂಜುನಾಥ.**ಕ.ಆ.ಸೇ(ಹಿರಿಯ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ
ಸಮಿತಿ, ಬಳ್ಳಾರಿ.